

## ಹೈಜಾಕ್–ಸನ್?

ಮೈಕೆಲ್ ಜಾಕ್ಸನ್ ಸತ್ತು ಈಗಾಗಲೆ ವರ್ಷ ದಾಟಿದೆ. ಇದೀಗ ಆತನ ಕೊನೆಯ ಮಗನ ಅಪ್ಪ ಯಾರು.. ಎಂಬ ವಿವಾದ ಮತ್ತೆ ಭುಗಿಲೆದ್ದಿದೆ. 'ಜಾಕ್ಸನ್ನನ ಕೊನೆಯ ಮಗ ಬ್ಲಾಂಕೆಟ್ ಯಾನೆ ಪ್ರಿನ್ಸ್ ಮೈಕೆಲ್ ಜಾಕ್ಸನ್–2 ನನ್ನ ವೀರ್ಯ ದಾನದಿಂದ ಹುಟ್ಟಿದ್ದಾನೆ' ಎಂದು ಜಾಕ್ಸನ್‌ನ ಮಾಜಿ ಅಂಗರಕ್ಷಕ ಮ್ಯಾಟ್ ಫಿಡ್ಸ್ ಹೇಳಿದ್ದಾನೆ.

'ಜಾಕ್ಸನ್‌ಗೂ ಇದು ಗೊತ್ತಿತ್ತು. ಸದ್ಯಕ್ಕೆ ಪ್ರಿನ್ಸ್ ಕಾನೂನು ಪ್ರಕಾರ ಅಜ್ಜಿಯ ಜತೆಗೆ ಇದ್ದಾನೆ. ಅಜ್ಜಿ ತೀರಿಕೊಂಡ ಬಳಿಕ ಕೇಸ್ ಹಾಕಿ ಡಿಎನ್‌ಎ ಟೆಸ್ಟ್ ಮಾಡಿಸಿ ಅವನನ್ನು ನನ್ನ ಬಳಿಗೇ ಕರೆಸಿಕೊಳ್ಳುತ್ತೇನೆ' ಎಂದು ಫಿಡ್ಸ್ ಗುಡುಗು ಹಾಕಿದ್ದಾನೆ. ಜಾಕ್ಸನ್ನನ 'ಸನ್' ಹೈಜಾಕ್ ಆದರೆ ಅವನನ್ನು ಜೋಕ್ಸನ್ ಎಂದು ಕರೆಯಬಹುದೆ? ಎಂಟು ವರ್ಷದ ಬಾಲಕ ಪ್ರಿನ್ಸ್, ಸದ್ಯಕ್ಕೆ ಈ ಬಗ್ಗೆ ತಲೆ ಕೆಡಿಸಿಕೊಂಡಿಲ್ಲವಂತೆ.



## ಬಚ್ಚನ್ ಸ್ಟೈಲ್

ಕೆಲವು ವರ್ಷಗಳಿಂದೀಚೆಗೆ ಅಮಿತಾಭ್ ಇನ್ನಷ್ಟು ಯುವಕ ಆಗುತ್ತಿದ್ದಾರೆ. ಕ್ಲೀನ್ ಶೇವ್‌ನಲ್ಲಿ ಓಡಾಡುತ್ತಿದ್ದ ಅಮಿತಾಭ್, ಒಮ್ಮೆಲೆ ಫ್ರೆಂಚ್ ಗಡ್ಡ ಬಿಟ್ಟುಕೊಂಡು ಅಭಿಮಾನಿಗಳಿಗೆ ಅಚ್ಚರಿ ಉಂಟು ಮಾಡಿದ್ದರು. ಅದೀಗ ಹಳೆಯದಾಯ್ತು. ಇದೀಗ ರಾಜ್‌ಕುಮಾರ್ ಸಂತೋಷಿ ನಿರ್ದೇಶನದ ಹೊಸ ಚಿತ್ರ 'ಪವರ್'ನಲ್ಲಿ ಅಮಿತಾಭ್ ಟ್ರಿಮ್ ಮಾಡಿದ ಪೂರ್ತಿ ಗಡ್ಡ ಬಿಟ್ಟಿದ್ದಾರೆ. ನೋಡುವಾಗ ಸೈಫ್ ಅಲಿಖಾನ್‌ನ ಗಡ್ಡದಂತೆ ಕಾಣಿಸುವ ಈ ಲುಕ್‌ನಲ್ಲಿ ಅಮಿತಾಭ್ ಇನ್ನಷ್ಟು ಯಂಗ್ ಆಗಿದ್ದಾರೆ. ಹಿಂದೆ ಅಪೂರ್ವ ಲಖಿಯಾ ನಿರ್ದೇಶನದ 'ಏಕ್ ಅಜ್‌ನಬೀ' ಯಲ್ಲಿ ಬೆಳ್ಳಿ ಕೂದಲಿನೊಂದಿಗೆ ಹೊಸ ಲುಕ್ ನೀಡಿದ್ದ ಅಮಿತಾಭ್ ಜತೆ ಸ್ಟೈಲ್ ಸ್ಟೇಟ್‌ಮೆಂಟ್‌ನಲ್ಲಿ ಸ್ಪರ್ಧಿಸಲು ಮಗ ಅಭಿಷೇಕ್‌ಗೂ ಆಗುತ್ತಿಲ್ಲವಂತೆ!

## ಲತಾ ದೀದಿಯ ಡ್ಯೂಯೆಟ್



ಲತಾ ದೀದಿಗೆ ಕಳೆದ ವಾರ 81 ತುಂಬಿತು. 'ಬರ್ತ್‌ಡೇಗೆ ಎಲ್ಹೋಗಿದ್ರಿ?' ಎಂದು ನಿಕಟವರ್ತಿಗಳು ಪ್ರಶ್ನಿಸಿದರೆ, 'ಎಲ್ಲೂ ಹೋಗಿಲ್ಲ. ಕೊಲ್ಹಾಪುರದ ಮನೆಯಲ್ಲೇ ಇದ್ದೆ. ಬೆಳಿಗ್ಗೆ ಎಂದಿನಂತೆ ದೇವರ ಪೂಜೆ ಮಾಡಿದೆ. ಮಧ್ಯಾಹ್ನ ಎಲ್ಲರ ಜತೆ ಕುಳಿತು ಊಟ ಮಾಡಿದೆ' ಎಂದಿದ್ದಾರೆ ಈ ಗಾನ ಕೋಗಿಲೆ! ಸೆಲೆಬ್ರಿಟಿಗಳಲ್ಲೇ ಅತ್ಯಂತ ಎತ್ತರದ ಸ್ಥಾನದಲ್ಲಿರುವ ಲತಾ ದೀದಿ, ಸರಳ ಜೀವನಕ್ಕೆ ಒತ್ತು ಕೊಟ್ಟವರು. 1942ರಲ್ಲಿ ಹಾಡಲು ಶುರು ಮಾಡಿದ ಲತಾ ದೀದಿ, ಈಗಾಗಲೆ ಸಾವಿರಕ್ಕೂ ಹೆಚ್ಚು ಹಿಂದಿ ಸಿನಿಮಾಗಳಲ್ಲಿ ಮತ್ತು 36ಕ್ಕೂ ಹೆಚ್ಚು ಇತರ ಭಾಷೆಯ ಸಿನಿಮಾಗಳಲ್ಲಿ ಹಾಡಿದ್ದಾರೆ.

ಹೊಸ ಸುದ್ದಿ ಏನೆಂದರೆ, ಗಝಲ್ ಸಾಮ್ರಾಟ, ಪಾಕಿಸ್ತಾನದ ಮೆಹ್ದಿ ಹಸನ್ ಜತೆಗೆ ಡ್ಯೂಯೆಟ್ ಹಾಡಬೇಕೆಂಬ ಅವರ ಇಚ್ಛೆ ಇದೀಗ ಪೂರ್ಣವಾಗಿದೆ. ವರ್ಷದ ಹಿಂದೆಯೇ 'ತೇರಾ ಮಿಲ್‌ನಾ' ಎಂಬ ಮೆಹ್ದಿ ಹಸನ್ ಗಝಲ್ ಪಾಕಿಸ್ತಾನದಲ್ಲಿ ಧ್ವನಿ ಮುದ್ರಣವಾಗಿತ್ತು. ಅನಾರೋಗ್ಯದಿಂದ ಮೆಹ್ದಿ ಹಸನ್ ಹಾಸಿಗೆ ಹಿಡಿದಿರುವುದು ಅಲ್ಲಿಯೇ ರೆಕಾರ್ಡಿಂಗ್ ಆಗಲು ಕಾರಣ. ಮುಂಬೈಯಲ್ಲಿ ಅದಕ್ಕೆ ಲತಾ ದನಿಗೂಡಿಸಿದ್ದಾರೆ. ಈ ಹೊಸ ಆಲ್ಬಂ ಶೀಘ್ರದಲ್ಲೇ ಹೊರಬರಲಿದೆಯಂತೆ.



## ಕಾಮ ರಾಜ್ಯದ ಕನಸು!

ಆಫ್ರಿಕಾದ ಪುಟ್ಟ ದೇಶ ಸ್ವಾಝಿಲ್ಯಾಂಡ್‌ನ ದೊರೆ ಮೂರನೇ ಎಮ್ಸ್‌ವತಿಗೆ ಈಗ 42 ವರ್ಷ. 14 ಪತ್ನಿಯರನ್ನು ಹೊಂದಿರುವ ಈತನಿಗೆ 23 ಮಕ್ಕಳು. ಮೊನ್ನೆ 22ರ ಹರೆಯದ ಈತನ 12ನೆಯ ಪತ್ನಿ ನೊತಾಂಡೊ ದೂಬೆ ರಾಯಲ್ ವಿಲ್ಲಾಸ್ ಹೋಟೆಲ್‌ನಲ್ಲಿ ಕಾಮ ಕೇಳಿ ನಡೆಸುವಾಗ ರಾಜಭಟರ ಕೈಗೆ ಸಿಕ್ಕು ಬಿದ್ದಿದ್ದಾಳೆ! ಅಂದ ಹಾಗೆ, ರಾಣಿಯ ಜತೆ ಮಂಚದ ಮೇಲಿದ್ದಾತ ರಾಜ್ಯದ ಕಾನೂನು ಮಂತ್ರಿ ಡುಮಿಸೊ ಮಾಂಬ! ಸದ್ಯಕ್ಕೆ ಕಾನೂನು ಮಂತ್ರಿ ಜೈಲಿನಲ್ಲಿದ್ದಾನೆ. ದೂಬೆ ಅರಮನೆಯ ಗೃಹಬಂಧನದಲ್ಲಿ ಇದ್ದಾಳೆ.

ಕಾನೂನು ಮಂತ್ರಿ ಡುಮಿಸೊ ರಾಜನ ಹೆಂಡತಿಯನ್ನು ರಮಿಸೋದಕ್ಕೆ ಹೋದದ್ದು ತಪ್ಪೇ ಬಿಡಿ. ಆದರೆ 42ರ ರಾಜ 22ರ ಹುಡುಗಿಯನ್ನು ಮದುವೆಯಾದದ್ದು ಎಷ್ಟು ಸರಿ.. ಎಂದು ಕೇಳುವಂತಿಲ್ಲ. ಯಾಕೆಂದರೆ ಅಲ್ಲಿರೋದು ರಾಜಪ್ರಭುತ್ವ. ಈ ದೇಶಕ್ಕೆ 1968ರಲ್ಲೇ ಸ್ವಾತಂತ್ರ್ಯ ಸಿಕ್ಕಿದ್ದರೂ, ಜನರಿಗೆ ಸ್ವಾತಂತ್ರ್ಯ ಇನ್ನೂ ಸಿಕ್ಕಿಲ್ಲ. ಪ್ರತಿವರ್ಷವೂ ದೊರೆ, ರಾಜ್ಯದ ಹರೆಯದ ಹುಡುಗಿರನ್ನೆಲ್ಲ ಕರೆಸಿ ಸಂಗೀತ–ನೃತ್ಯ ಮಾಡಿಸುತ್ತಾನಂತೆ. ತನಗೆ ಸುಂದರವಾಗಿ ಕಂಡ ಹುಡುಗಿಯರನ್ನು ರಾಣಿಯನ್ನಾಗಿ ಸ್ವೀಕರಿಸುತ್ತಾನಂತೆ. '12ನೇ ರಾಣಿ ಕೈಕೊಟ್ಟರೇನು.. ಇನ್ನೆರಡು ರಾಣಿಯರನ್ನು ತರುತ್ತೇನೆ' ಎಂದು ರಾಜ ತೊಡೆ ತಟ್ಟಿದ್ದಾನಂತೆ! ನಮ್ಮಲ್ಲಿ ರಾಮ ರಾಜ್ಯದ ಕನಸಾದರೆ, ಅಲ್ಲಿಯ ದೊರೆಯದ್ದು ಕಾಮ–ರಾಜ್ಯದ ಕನಸು!

■ ಬಿಂದು

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65